# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/2567/2021
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:02/02/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಇಬ್ರಾಹಿಂ, ಖೊಂದುಸಾಹೇಬ ಖೊಂದುನಾಯ್ಕ, ಬಿನ್ ಖೊಂದುಸಾಹೇಬ, ಕಂದಾಯ ನಿರೀಕ್ಷಕರು, ತಹಶೀಲ್ದಾರ್‌ರವರ ಕಚೇರಿ, ಬೈಲಹೊಂಗಲ, ಬೆಳಗಾವಿ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಳಗಾವಿ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಇಬ್ರಾಹಿಂ, ಖೊಂದುಸಾಹೇಬ ಖೊಂದುನಾಯ್ಕ, ಬಿನ್ ಖೊಂದುಸಾಹೇಬ, ಕಂದಾಯ ನಿರೀಕ್ಷಕರು, ತಹಶೀಲ್ದಾರ್ ರವರ ಕಚೇರಿ, ಬೈಲಹೊಂಗಲ, ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು ಸಾರ್ವಜನಿಕ ಕೆಲಸ ಮಾಡಿಕೊಡಲು ಅನಧಿಕೃತವಾಗಿ ಹಣ ಕೇಳಿ ಪಡೆಯುತ್ತಿರುವುದು ನಿಜವೆಂದು ತಿಳಿದುಬಂದಿದ್ದು, ಅದರ ಮೇಲೆ ಗೋಪಾಲ ಡಿ ಜೋಗಿನ್, ಪೋಲೀಸ್ ನಿರೀಕ್ಷಕರು, ಎ.ಸಿ.ಬಿ ಪೋಲಿಸ್ ಠಾಣೆ, ಬೆಳಗಾವಿ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರು ವರದಿ ಸಲ್ಲಿಸಿದರ ಮೇರೆಗೆ ಸಾರ್ವಜನಿಕರಿಂದ ಅನಧಿಕೃತವಾಗಿ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಬೆಳಗಾವಿ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:06/2019** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದಿನಾಂಕ:20/08/2018ರಂದು ಬೈಲಹೊಂಗಲದ ನೊಂದ ನಾಗರೀಕರು, ಗೌರವಾನ್ವಿತ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ "ಬೈಲಹೊಂಗಲದ ತಹಶೀಲ್ದಾರವರ ಕಚೇರಿಯಲ್ಲಿ ಅನಧಿಕೃತವಾಗಿ ಕೆಲಸ ಮಾಡುತ್ತಿರುವ ದಿಲಾವರ ನದಾಫ ಹಾಗೂ ದಾದಾಪೀರ ತಹಶೀಲ್ದಾರ ಎಂಬ ಹುಡುಗರು ನಾಗರೀಕರಿಂದ ಮನಸ್ಸಿಗೆ ಬಂದಂತೆ ದುಡ್ಡು ವಸೂಲಿ ಮಾಡುತ್ತಿದ್ದು, ಅವರನ್ನು ಕೇಳುವವರು ಯಾರೂ ಇಲ್ಲದಂತಾಗಿದೆ.

ಏನಾದರೂ ಕೆಲಸ ಮಾಡಿಕೊಳ್ಳಲು ಕಚೇರಿಗೆ ಹೋದರೆ ದಿಲಾವರ ನದಾಫ ಎಂಬುವವನು ತಹಶೀಲ್ದಾರ ಸಾಹೇಬರಿಗಿಂತ ಜಬರು ಮಾಡಿ ಹಣವನ್ನು ಮಾವುದೇ ಭಯವಿಲ್ಲದೇ ಕೇಳುತ್ತಾರೆ. ಇವರನ್ನು ಯಾವ ಆಧಾರದ ಮೇಲೆ ತಹಶೀಲ್ದಾರವರು ನೇಮಕ ಮಾಡಿಕೊಂಡಿದ್ದಾರೆ ಎಂಬುದು ನಮಗೆ ತಿಳಿಯುತ್ತಿಲ್ಲ. ತಮಗೆ ಬೇಕಾದವರನ್ನು ಒಳಗೆ ಕರೆದುಕೊಂಡು ಕಚೇರಿಯಲ್ಲಿ ಯಾವುದೇ ಕೆಲಸವಿದ್ದರೂ ಮಾಡಿಕೊಡುವ ಇವರು ನಮ್ಮಂಥವರು ಹೋದರೆ ನಮಗೆ ಏನೂ ಗೊತ್ತಿಲ್ಲ, ಸಾಹೇಬರನ್ನು ಕೇಳಿರಿ ಇಲ್ಲವಾದರೆ ಇಷ್ಟು ರೊಕ್ಕ ಕೊಟ್ರೆ ಮಾಡಿಸಿ ಕೊಡುತ್ತೇನೆ ಎಂದು ಯಾವುದೇ ಭಯವಿಲ್ಲದೇ ಹೇಳುತ್ತಾರೆ. ಇವರು ಸಾರ್ವಜನಿಕರಿಂದ ದುಡ್ಡು ಕೇಳುವ ಕೆಲಸ ಮಾಡುತ್ತಿದ್ದು, ಇವರನ್ನು ಕಚೇರಿಯ ನೌಕರರೆಂದೇ ಜನರು ಭಾವಿಸಿರುತ್ತಾರೆ. ವೃದ್ಧಾಪ್ಯ ವೇತನ, ವಿಧವಾ ವೇತನ, ರೇಷನ್ ಕಾರ್ಡ್ ಹಾಗೂ ಕಚೇರಿಯಿಂದ ವಿತರಿಸುವ ಹಲವಾರು ಪ್ರಮಾಣ ಪತ್ರಗಳನ್ನು ಇವರೇ ತೆಗೆದುಕೊಂಡು ಜನರಿಗೆ ನಾವೇ ಮಾಡಿದ್ದೇವೆ ಎಂದು ಸಾಕಷ್ಟು ಪ್ರಮಾಣದಲ್ಲಿ ದುಡ್ಡು ಕೇಳುತ್ತಿದ್ದಾರೆ. ಇಷ್ಟೆಲ್ಲಾ ಹಾಡು ಹಗಲೇ ಲೂಟಿ ಹೊಡೆಯುತ್ತಿದ್ದರೂ ಮಾನ್ಯ ತಹಶೀಲ್ದಾರ್‌ರವರು ಸುಮ್ಮನಿದ್ದಾರೆಂದರೆ, ಇದರಲ್ಲಿ ಅವರದು ಕೂಡ ಕೈವಾಡ ಇದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದು ಮುಂತಾಗಿ ಆಪಾದಿಸಿ ಮೇಲಾಧಿಕಾರಿಗಳಿಗೆ ಸದರಿ ವಿಷಯವನ್ನು ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ವಿಚಾರಣೆ ನಡೆಯುತ್ತದೆ ಎಂದು ಈ ಅರ್ಜಿ ಬರೆಯುತ್ತಿದ್ದೇವೆ" ಎಂದು ದೂರು ಅರ್ಜಿಯಲ್ಲಿ ತಿಳಿಸಿರುತ್ತಾರೆ.

ii. ಸದರಿ ದೂರು ಅರ್ಜಿ ಮೇಲೆ ಮೇಲಾಧಿಕಾರಿಗಳ ಆದೇಶದಂತೆ ದೂರುದಾರರಾದ ಗೋಪಾಲ ಡಿ ಜೋಗಿನ, ಪೋಲೀಸ್ ಇನ್‌ಸ್ಪೆಕ್ಟರ್, ಕ.ಲೋ. ಪೋ.ಠಾಣೆ, ಬೆಳಗಾವಿ, ವಿಚಾರಣೆ ಕೈಗೊಂಡು ವಿಚಾರಣಾ ವರದಿಯಲ್ಲಿ "ಬೈಲಹೊಂಗಲದ ತಹಶೀಲ್ದಾರವರ ಕಚೇರಿಯ ಆವರಣದಲ್ಲಿರುವ ಕಂದಾಯ ನಿರೀಕ್ಷಕರ ಕಚೇರಿಯಲ್ಲಿ ಕಂದಾಯ ನಿರೀಕ್ಷಕರಾದ ಶ್ರೀ. ಇಬ್ರಾಹಿಂ, ಖೊಂದುಸಾಹೇಬ ಖೊಂದುನಾಯ್ಕ, ಇವರು ಖಾಸಗಿ ವ್ಯಕ್ತಿಗಳಾದ 1) ದಿಲಾವರ ಖಾದರ್‌ಸಾಬ್ ನದಾಫ, 2) ದಾದಾಪೀರ ಅಲ್ಲಾಭಕ್ಷ, ತಹಶೀಲ್ದಾರ್, ಮತ್ತು 3) ಚಂದ್ರಯ್ಯ ಶಿವಬಸಯ್ಯ ಹಿರೇಮಠ್, ಇವರನ್ನು ತಮ್ಮ ಕಚೇರಿಯ ಕೆಲಸಕ್ಕೆ ಅನಧಿಕೃತವಾಗಿ ನೇಮಿಸಿಕೊಂಡು ಸಾರ್ವಜನಿಕರಿಂದ ಅವರ ಕೆಲಸ ಮಾಡಿಕೊಡಲು ಅನಧಿಕೃತವಾಗಿ ಹಣ ಕೇಳಿ ಪಡೆಯುತ್ತಿರುವುದು ನಿಜವೆಂದು ತಿಳಿದು ಬರುತ್ತದೆ. ಸದರಿಯವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ವಿನಂತಿ" ಅಂತಾ ವಗ್ಯೆರೆ ವರದಿಯನ್ನು ಅವರ ಮೇಲಾಧಿಕಾರಿಗಳ ಮೂಲಕ ಗೌರವಾನ್ವಿತ ಲೋಕಾಯುಕ್ತರಿಗೆ ಸಲ್ಲಿಸಿದ್ದು, ಗೌರವಾನ್ವಿತ ಲೋಕಾಯುಕ್ತರು, ವರದಿಯನ್ನು ಪರಿಶೀಲಿಸಿ, ಎಸಿಬಿ ರವರು ಪ್ರಕರಣ ದಾಖಲಿಸಿ ತನಿಖೆ ಮಾಡಿ, ತಪ್ಪಿತಸ್ಥರ ಮೇಲೆ ದೋಷಾರೋಪಣೆ ಮಾಡಿ ವರದಿ ಸಲ್ಲಿಸಬೇಕೆಂದು ಆದೇಶಿಸಿದ್ದರ ಮೇರೆಗೆ, ಮೇಲಾಧಿಕಾರಿಗಳ ಆದೇಶದಂತೆ ಶ್ರೀ. ಜೆ. ರಘು, ಪೋಲೀಸ್ ಉಪಾಧಿಕ್ಷಕರು, ಬೆಳಗಾವಿ, ಇವರು ಶ್ರೀ. ಗೋಪಾಲ ಡಿ ಜೋಗಿನ, ಪೋಲೀಸ್ ಇನ್‌ಸ್ಪೆಕ್ಟರ್, ಕ.ಲೋ. ಪೋ.ಠಾಣೆ, ಬೆಳಗಾವಿ, ಇವರ ವರದಿ ಮೇರೆಗೆ ಮೇಲೆ

ಹೇಳಿದ ನಾಲ್ಕು ಜನರ ಮೇಲೆ ಬೆಳಗಾವಿ ಎಸಿಬಿ ಪೋಲೀಸ್ ಠಾಣಾ ಮೊಕದ್ದಮೆ ನಂ.06/2019ರಲ್ಲಿ ದಿ: 21/05/2019ರಲ್ಲಿ ಕಲಂ 7(a), 7(A), 13 (ಬಿ) ಲಂಚ ಪ್ರತಿಬಂಧಕ ಕಾಯಿದೆ 1988ರ (ತಿದ್ದುಪಡಿ 2018)ನೇದ್ದರ ಅಡಿ ಪ್ರಕರಣ ದಾಖಲಿಸಿಕೊಂಡು, ಪ್ರಕರಣದ ತನಿಖೆ ಮಾಡಿ ವರದಿ ಸಲ್ಲಿಸಲು ಶ್ರೀ. ವಿಶ್ವನಾಥ ಡಿ. ಕಬ್ಬೂರಿ, ಪೋಲೀಸ್ ಇನ್‌ಸ್ಪೆಕ್ಟರ್, ಎಸಿಬಿ ಪೋ.ಠಾಣೆ, ಬೆಳಗಾವಿ, ಇವರನ್ನು ತನಿಖಾಧಿಕಾರಿಯಾಗಿ ನೇಮಿಸಿ ಪ್ರಕರಣವನ್ನು ವಹಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಸಂತೋಷ ಸಿದ್ದಪ್ಪ ಗೇಟಿನ, 2) ಶ್ರೀ ವಿಜಯಕುಮಾರ್ ಮಹಾದೇವ ಸಿದ್ದಣ್ಣನವರ್, ಇವರುಗಳನ್ನು ಬೈಲಹೊಂಗಲ ಪ್ರವಾಸಿ ಮಂದಿರಕ್ಕೆ ಬರಮಾಡಿಕೊಂಡಿದ್ದು, ಅವರುಗಳ ಪರಿಚಯವನ್ನು ಮಾಡಿಕೊಂಡು, ತಮ್ಮ ಪರಿಚಯ ಹೇಳಿ, ದೂರಿನ ವಿಷಯವನ್ನು ಪಂಚರಿಗೆ ತಿಳಿಸಿ, ದೂರಿನ ಪ್ರತಿಯನ್ನು ನೀಡಿದ್ದು, ಅದನ್ನು ಓದಿ ತಿಳಿದುಕೊಳ್ಳಲು ಹೇಳಿದಂತೆ, ಪಂಚರುಗಳು ದೂರಿನಲ್ಲಿಯ ವಿಷಯವನ್ನು ಓದಿ ತಿಳಿದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಪಂಚರಿಗೆ ಬೈಲಹೊಂಗಲದ ಕಂದಾಯ ನಿರೀಕ್ಷಕರ ಕಚೇರಿ, ಸದರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ ಮತ್ತು ಖಾಸಗಿ ವ್ಯಕ್ತಿಗಳನ್ನು ಶೋಧನೆ ಕೈಗೊಳ್ಳಲು 4ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಿಂದ ಶೋಧನಾ ವಾರೆಂಟ್ ಪಡೆದಿರುವ ಬಗ್ಗೆ ತಿಳಿಸಿರುತ್ತಾರೆ.

iv. ಅದೇ ದಿನ ಅಂದರೆ ದಿನಾಂಕ: 21/05/2019ರಂದು ಸಾಯಂಕಾಲ 4-15 ಗಂಟೆಗೆ ತನಿಖಾಧಿಕಾರಿಗಳು ಪಂಚರು ಮತ್ತು ಸಿಬ್ಬಂದಿಯೊಂದಿಗೆ ಇಲಾಖಾ ವಾಹನಗಳಲ್ಲಿ ಹೊರಟು ಎದುರುದಾರರ ಕಚೇರಿಯ ಹತ್ತಿರ ಸಂಜೆ 4-30 ಗಂಟೆಗೆ ಬಂದು ಕಿಟಕಿ ಮತ್ತು ಬಾಗಿಲ ಮುಖಾಂತರ ಎದುರುದಾರರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವ್ಯಕ್ತಿಗಳನ್ನು ನೋಡಿದ್ದು, ಕಚೇರಿಯಲ್ಲಿ ಒಟ್ಟು ಮೂರು ಜನ ಟೇಬಲ್ ಮುಂದೆ ಇರುವ ಕುರ್ಚಿಯ ಮೇಲೆ ಕುಳಿತು ಕರ್ತವ್ಯ ನಿರ್ವಹಿಸುತ್ತಿದ್ದು, ಕೆಲಸಕ್ಕಾಗಿ ಬಂದ ಖಾಸಗಿ ವ್ಯಕ್ತಿಗಳು ಕಚೇರಿಯಲ್ಲಿ ನಿಂತುಕೊಂಡಿದ್ದು, ಆಗ ತನಿಖಾಧಿಕಾರಿಗಳು ಪಂಚರೊಂದಿಗೆ ಕಚೇರಿಯ ಒಳಗೆ ಹೋಗಿ ಕಂದಾಯ ನಿರೀಕ್ಷಕರು ಕುಳಿತುಕೊಳ್ಳುವ ಕುರ್ಚಿಯ ಮೇಲೆ ಕುಳಿತ ವ್ಯಕ್ತಿಯನ್ನು ಕರೆದು ಅವರಿಗೆ ತಮ್ಮ ಗುರುತಿನ ಚೀಟಿ ತೋರಿಸಿ, ಪಂಚರ ಹಾಗೂ ಸಿಬ್ಬಂದಿಯ ಪರಿಚಯ ಮಾಡಿಸಿ, ಸದರಿಯವರಿಗೆ ಅವರ ಹೆಸರು ವಿಳಾಸ ತಿಳಿಯಲಾಗಿ ಅವರು ಎದುರುದಾರರಾಗಿರುತ್ತಾರೆ. ನಂತರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಇನ್ನೂ ಎರಡು ಜನ ವ್ಯಕ್ತಿಗಳನ್ನು ಕರೆದು ಅವರ ಹೆಸರು, ವಿಳಾಸ ಕೇಳಲಾಗಿ, ಅವರು ದಿಲಾವಾರ್ ಮತ್ತು ದಾದಾಪೀರ್ ಅಂತ ತಿಳಿಸಿದ್ದು, ಎದುರುದಾರರಿಗೆ ಮತ್ತು ಆ ಎರಡು ಜನ ಖಾಸಗಿ ವ್ಯಕ್ತಿಗಳಿಗೆ ಅವರ ಮೇಲೆ ಲಂಚ ಪ್ರತಿಬಂಧಕ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಾದ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿ ಮತ್ತು ನ್ಯಾಯಾಧೀಶರಿಂದ ಶೋಧನಾ

ವಾರೆಂಟ್ ಪಡೆದಿರುವ ಬಗ್ಗೆ ಅವರಿಗೆ ತಿಳಿಸಿ, ವಾರೆಂಟ್‌ನ್ನು ತೋರಿಸಿ, ಎದುರುದಾರರ ಸಹಿ ಪಡೆದು ಅವರ ಅಂಗಜಡ್ತಿಯನ್ನು ಕೈಗೊಂಡಿರುತ್ತಾರೆ. ಎದುರುದಾರರನ್ನು ಅಂಗ ಶೋಧನೆ ಮಾಡಿದ ಕಾಲಕ್ಕೆ ಅವರ ಬಳಿ ಒಟ್ಟು 24,140/- ರೂ. ಹಣ ಹಾಗೂ ಇತರೆ ವಸ್ತುಗಳು ಲಭ್ಯವಾಗಿರುತ್ತವೆ. ಖಾಸಗಿ ವ್ಯಕ್ತಿಯಾದ ದಿಲಾವಾರ್ ನದಾಫ್ ಇವರನ್ನು ಅಂಗ ಶೋಧನೆ ಮಾಡಿದಾಗ ಅವರ ಬಳಿ ಒಟ್ಟು 2,110/- ರೂ. ಹಣ ಹಾಗೂ ಇತರೆ ವಸ್ತುಗಳು ಲಭ್ಯವಾಗಿರುತ್ತವೆ. ಇನ್ನೊಬ್ಬ ಖಾಸಗಿ ವ್ಯಕ್ತಿಯಾದ ದಾದಾಫೀರ್, ತಹಶೀಲ್ದಾರ್, ಇವರನ್ನು ಅಂಗ ಶೋಧನೆ ಮಾಡಿದಾಗ ಇವರ ಬಳಿ ಒಟ್ಟು 1,730/- ರೂ. ಹಣ ಹಾಗೂ ಇತರೆ ವಸ್ತುಗಳು ಲಭ್ಯವಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಎದುರುದಾರರು ಕುಳಿತುಕೊಳ್ಳುವ ಟೇಬಲ್ ಮುಂದೆ ಇರುವ ಕುರ್ಚಿಯ ಹಿಂದೆ ದಕ್ಷಿಣಕ್ಕೆ ಉತ್ತರಾಭಿಮುಖವಾಗಿದ್ದ ಸ್ವಾರ್ ಕಂಪೆನಿಯ ಸ್ಟೀಲ್ ಟ್ರೆಜರಿಯನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಿದಾಗ, ಅದರಲ್ಲಿ ವಿವಿಧ ಮುಖಬೆಲೆಯ ಒಟ್ಟು 42,000/- ರೂ. ಗಳ ನಗದು ಹಾಗೂ ಕಚೇರಿಗೆ ಸೇರಿದ ಇತರೆ ದಾಖಲಾತಿಗಳು ಲಭ್ಯವಾಗಿರುತ್ತವೆ. ಅದರಂತೆ ಎದುರುದಾರರು ಕುಳಿತುಕೊಳ್ಳುವ ಟೇಬಲ್ ಮುಂದೆ ಇರುವ ಕುರ್ಚಿಯ ಹಿಂದಿನ ಬಾಜು ಎಡಗಡೆ ಇರುವ ಪೂರ್ವಕ್ಕೆ ಮುಖ ಮಾಡಿದ ಗಾಡ್ರೇಜ್ ಕಂಪೆನಿಯ ಬೀರುವನ್ನು ಪರಿಶೀಲಿಸಿದಾಗ, ಅದರಲ್ಲಿ 100/- ಮುಖಬೆಲೆಯ 10,000/- ರೂ. ಹಣ ನಗದು ಹಾಗೂ ಇತರೆ ದಾಖಲಾತಿಗಳು ಲಭ್ಯವಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಖಾಸಗಿ ವ್ಯಕ್ತಿ ದಿಲಾವಾರ್ ನದಾಫ್ ಕುಳಿತುಕೊಳ್ಳುವ ಟೇಬಲ್ ಕುರ್ಚಿಯ ಬಾಜು ಇದ್ದ ಕಸದ ರಟ್ಟಿನ ಡಬ್ಬಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ವೇಸ್ಟ್ ಹಾಳೆಗಳಿದ್ದು ಅವುಗಳ ಕೆಳಗೆ ರೂ. 2,000/- ಮುಖಬೆಲೆಯ 3-ನೋಟುಗಳು, 500/- ಮುಖಬೆಲೆಯ 9-ನೋಟುಗಳು ಹಾಗೂ 50/-ರೂ. ಮುಖಬೆಲೆಯ 1-ನೋಟು ಹೀಗೆ ಒಟ್ಟು 10,550/- ನಗದು ಹಣ ಲಭ್ಯವಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಖಾಸಗಿ ವ್ಯಕ್ತಿ ದಿಲಾವಾರ್ ನದಾಫ್ ಕುಳಿತುಕೊಳ್ಳುವ ಟೇಬಲ್ ಡ್ರಾ ಪರಿಶೀಲಿಸಲಾಗಿ, ಅದರಲ್ಲಿ ಸಾರ್ವಜನಿಕರು ನೀಡಿದ ಅರ್ಜಿಗಳು ಹಾಗೂ ಟೇಬಲ್‌ನ ಎಡಗಡೆ ಡ್ರಾದಲ್ಲಿ 2,000/- ಮುಖಬೆಲೆಯ 1-ನೋಟು, 500/- ಮುಖಬೆಲೆಯ 7-ನೋಟುಗಳು, ಹೀಗೆ ಒಟ್ಟು 5,500/- ನಗದು ಹಣ ಲಭ್ಯವಾಗಿರುತ್ತವೆ. ನಂತರ ಖಾಸಗಿ ವ್ಯಕ್ತಿ ದಿಲಾವಾರ್ ನದಾಫ್ ಕುಳಿತುಕೊಳ್ಳುವ ಎಡಬಾಜು ಇರುವ ನ್ಯಾಷನಲ್ ಕಂಪೆನಿ ಟ್ರೆಜರಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ಕಚೇರಿಗೆ ಸಂಬಂದಿಸಿದ ದಾಖಲಾತಿಗಳನ್ನು ಹೊರತುಪಡಿಸಿ, ಯಾವುದೇ ಹಣ ಲಭ್ಯವಾಗಿರುವುದಿಲ್ಲ. ನಂತರ ಖಾಸಗಿ ವ್ಯಕ್ತಿ ದಾದಾ ಫೀರ್, ತಹಶೀಲ್ದಾರ್, ಕೆಲಸ ಮಾಡುವ ಟೇಬಲ್ ಪರಿಶೀಲಿಸಲಾಗಿ, ಅದರಲ್ಲಿ ಸಾರ್ವಜನಿಕರು ನೀಡಿದ ಅರ್ಜಿಗಳನ್ನು ಹೊರತುಪಡಿಸಿ, ಯಾವುದೇ ಹಣ ಲಭ್ಯವಾಗಿರುವುದಿಲ್ಲ.

v. ನಂತರ ತನಿಖಾಧಿಕಾರಿಗಳು ಕಚೇರಿಯಲ್ಲಿದ್ದ ಸಾರ್ವಜನಿಕರಾದ ಶ್ರೀ. ಎಲ್ಲಪ್ಪ ಹಾಗೂ ಶಿವಬಸಪ್ಪ ಗೌಡಪ್ಪನವರ್ ಇವರನ್ನು ವಿಚಾರಿಸಿ, ಹೇಳಿಕೆ ಮಾಡಿಕೊಂಡಿದ್ದು,

ಸದರಿಯವರು ತಮ್ಮ ಹೇಳಿಕೆಗಳಲ್ಲಿ ಎದುರುದಾರರು ತಮ್ಮೊಂದಿಗೆ ಖಾಸಗಿ ವ್ಯಕ್ತಿಗಳನ್ನು ನೇಮಿಸಿಕೊಂಡು ಅವರ ಮುಖಾಂತರ ಪ್ರತಿಯೊಂದು ಸರಕಾರಿ ಕೆಲಸಗಳಿಗೆ ಹಣ ಕೇಳಿ ಪಡೆದುಕೊಳ್ಳುತ್ತಾರೆ ಅಂತ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಹಾಗೂ ಮೇಲೆ ಹೇಳಿದ ಎರಡು ಜನ ಖಾಸಗಿ ವ್ಯಕ್ತಿಗಳಿಗೆ ಅವರ ಬಳಿ ಲಭ್ಯವಾದ ಹಣದ ಬಗ್ಗೆ ವಿವರಣೆಯನ್ನು ಕೇಳಿ ಪಡೆದುಕೊಂಡಿರುತ್ತಾರೆ. ಎದುರುದಾರರು ತಮ್ಮ ವಿವರಣೆಯಲ್ಲಿ "ನಾನು ಕಳೆದ 4-ವರ್ಷಗಳಿಂದ ಬೈಲಹೊಂಗಲ ಹೋಬಳಿಯ ಕಂದಾಯ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ದಿನ ದಿನಾಂಕ;21/05/2019ರಂದು ನಾನು ಕಚೇರಿಯಲ್ಲಿ ದಿಲಾವಾರ ಖಾದರ್ ಸಾಬ್ ನದಾಫ್ ಹಾಗೂ ದಾದಾಫೀರ್ ಅಲ್ಲಾಭಕ್ಷ, ತಹಶೀಲ್ದಾರ್, ಇವರ ಜೊತೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ತಾವು ಹಾಗೂ ಪಂಚರು ಬಂದಿದ್ದು, ನಮ್ಮ ಕಚೇರಿಯಲ್ಲಿ ಒಬ್ಬರು ದಿಲಾವಾರ ಖಾದರ್ ಸಾಬ್ ನದಾಫ್ ಸಾ: ಗೋವನ್ ಕೊಪ್ಪ, ಇವರನ್ನು ನನಗೆ ಗಣಕ ಯಂತ್ರದ ಜ್ಞಾನ ಇಲ್ಲದ ಕಾರಣ ಕಚೇರಿಯಲ್ಲಿ ಹೆಚ್ಚಿನ ಕೆಲಸ ಇರುವ ಕಾರಣ ಸದರಿಯವರನ್ನು ಗಣಕ ಯಂತ್ರ ನಿರ್ವಹಣಾ, ಆವಕ-ಜಾವಕ ನಿರ್ವಹಣಾ, ಪ್ರತಿತಿಂಗಳು ದಿನಚರಿ ನಿರ್ವಹಣಾ ಹಾಗೂ ಇತರೆ ಕಚೇರಿ ಕೆಲಸಗಳಿಗೆ ದಿನಕ್ಕೆ 200/- ರೂ. ನಂತೆ ಸಂಬಳ ಕೊಟ್ಟು ಇಟ್ಟುಕೊಂಡಿರುತ್ತೇನೆ. ಅದೇ ರೀತಿ ದಾದಾ ಫೀರ್, ತಹಶೀಲ್ದಾರ್, ಸಾ: ಗೋವನ್ ಕೊಪ್ಪ ಇವರನ್ನು ಕೂಡಾ ಕಳೆದ 4-ವರ್ಷಗಳಿಂದ ತಿಂಗಳಿಗೆ 3,000/- ರೂ. ನಂತೆ ನಮ್ಮ ಕಚೇರಿಯಲ್ಲಿ ಜಾತಿ ಆದಾಯದ ಪ್ರಮಾಣ ಪತ್ರಗಳನ್ನು ಬರೆದುಕೊಡುವುದು ಹಾಗೂ ಇನ್ನಿತರ ಕೆಲಸಗಳನ್ನು ನಿರ್ವಹಿಸಲು ನೇಮಿಸಿರುತ್ತೇನೆ. ಸದರಿಯವರ ನೇಮಕಾತಿಗೆ ಮೇಲಾಧಿಕಾರಿಗಳ ಅನುಮತಿ ಪಡೆದಿರುವುದಿಲ್ಲ. ತಿಜೋರಿಯಲ್ಲಿ ಸಿಕ್ಕ ರೂ.1,42,000/- ಹಣವು ನಮ್ಮ ಹೋಬಳಿಯ ಸರ್ಕಾರಿ ಪಡಾ ಜಮೀನು ಏಕ್ ಸಾಲ್ ಲಿಲಾವು ಮಾಡಿದ ಹಣ ರೈತರು ಕೆಟು ಚಲನ್ ಮಾಡಲು ರೈತರು ಕೊಟ್ಟಿದ್ದು, ಈ ರೀತಿ ಇದೆ. (1) ಅನಿಗೋಳ್ ಗ್ರಾಮದ ಲಿಲಾವು ರಕಂ 90,000/-, (2) ಬೆಳವಡಿ ಗ್ರಾಮದ ಲಿಲಾವು ರಕಂ 42,000/- ಮತ್ತು (3) ಚಿವಟಗುಂಡಿ ಗ್ರಾಮದ ಲಿಲಾವು ರಕಂ 10,000/- ನನ್ನ ಪ್ಯಾಂಟ್ ಕಿಸೆಯಲ್ಲಿ ದೊರೆತ ರೂ. 24,140/-ಗಳು ರಂಜಾನ್ ಹಬ್ಬದ ಸಲುವಾಗಿ ಮಕ್ಕಳಿಗೆ ಬಟ್ಟೆ ತರಲು ಇಟ್ಟಿದ್ದು, ಇದೆ ಅಂತಾ ಸಮಜಾಯಿಷಿ ಕೊಟ್ಟಿರುತ್ತಾರೆ.

vi. ದಿಲಾವಾರ ಖಾದರ್ ಸಾಬ್ ನದಾಫ್ ಖಾಸಗಿ ವ್ಯಕ್ತಿ ಇವರು ವಿವರಣೆ ಕೊಟ್ಟಿದ್ದು, ಅದರಲ್ಲಿ "ನಾನು ಬೈಲಹೊಂಗಲ ತಾಲ್ಲೂಕಿನ ಗೋಪನಕೊಪ್ಪ ಗ್ರಾಮದ ಖಾಯಂ ರಹವಾಸಿ ಹಾಗೂ ನಿವಾಸಿಯಾಗಿದ್ದು, ಕಳೆದ 4-ವರ್ಷಗಳಿಂದ ಕಂದಾಯ ನಿರೀಕ್ಷಕರು ಬೈಲಹೊಂಗಲ, ಇವರಲ್ಲಿ ಗಣಕಯಂತ್ರ ಆಪರೇಟರ್ ಅಂತಾ ಕೆಲಸವನ್ನು ಮಾಡುತ್ತಿದ್ದೇನೆ. ಆದರೆ ನನಗೆ ಮಾನ್ಯ ಕಂದಾಯ ನಿರೀಕ್ಷಕರು ಬೈಲಹೊಂಗಲ, ಇವರು ಪ್ರತಿ ದಿನ 200/- ರೂ. ಕೂಲಿ ಕೊಡುತ್ತಿದ್ದುದು ಇರುತ್ತದೆ. ಇವತ್ತು ದಿನಾಂಕ: 21/05/2019ರಂದು ನನ್ನ ಟೇಬಲ್ ಕೆಳಗೆ ಡ್ರಾದಲ್ಲಿ 5,500/- ರೂ. ನನ್ನ

ಹತ್ತಿರ ಡಸ್ಟ್‌ಬಿನ್ ಡಬ್ಬಿಯಲ್ಲಿ ರೂ. 10,550/– ಮತ್ತು ನನ್ನ ಶರ್ಟಿನಲ್ಲಿ 2110/– ರೂ.ಗಳು ಹೀಗೆ ಒಟ್ಟು 18,160/– ರೂ.ಗಳು ನನ್ನ ಹಣವಿದ್ದು, ಸದರಿ ಹಣವು ನನ್ನ ಸಹೋದರ ಹತ್ತಿರ ಜಮೀನಕ್ಕೆ ಗೊಬ್ಬರ ಮತ್ತು ಔಷಧ ಹಾಗೂ ಬೀಜಗಳನ್ನು ತರಲಿಕ್ಕೆ ಹಾಗೂ ನನ್ನ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದು, ಅವರ ಚಿಕಿತ್ಸೆ ಸಲುವಾಗಿ ತಂದಿದ್ದು ಇರುತ್ತದೆ ಅಂತಾ ಮಾನ್ಯರಲ್ಲಿ ಬರೆದುಕೊಂಡ ವಿನಂತಿ" ಎಂದು ವಿವರಣೆ ಕೊಟ್ಟಿರುತ್ತಾರೆ. ನಂತರ ದಾದಾಫೀರ್ ಅಲ್ಲಾಭಕ್ಷ, ತಹಶೀಲ್ದಾರ್, ಖಾಸಗಿ ವ್ಯಕ್ತಿ ಇವರು ವಿವರಣೆ ಕೊಟ್ಟಿದ್ದು, ಅದರಲ್ಲಿ "ನಾನು ಬೈಲಹೊಂಗಲ ತಾಲ್ಲೂಕಿನ ಗೋಪನಕೊಪ್ಪ ಹಾಲಿ ವಸ್ತಿ ಅನಿಗೋಳ ತಾ: ಬೈಲಹೊಂಗಲ ಜಿ: ಬೆಳಗಾವಿ, ನಾನು ದಿ:08/06/2015 ರಿಂದ ಪ್ರಸ್ತುತವರೆಗೆ ಕಂದಾಯ ನಿರೀಕ್ಷಕರು ಬೈಲಹೊಂಗಲ, ಇವರಲ್ಲಿ ಕಚೇರಿಯ ಸಹಾಯಕ ಅಂತಾ ಕೆಲಸ ಮಾಡುತ್ತಿದ್ದು, ನಾನು ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಬರೆದು ಸಾಹೇಬರ ಸಹಿಗೆ ಕೊಡುತ್ತೇನೆ. ನನಗೆ ಕಂದಾಯ ನಿರೀಕ್ಷಕರು 1–ತಿಂಗಳಿಗೆ 3000/– ರೂ. ಸಂಬಳ ಕೊಡುತ್ತಾರೆ. ನನ್ನ ಬಳಿ ದಿ: 21/05/2019ರಂದು 1730/– ರೂ. ಇದ್ದು, ಈ ನನ್ನ ತಾಯಿಗೆ ಮಾತ್ರೆ ಹಣ ಇರುತ್ತದೆ. ನನ್ನ ತಾಯಿ ಆರೋಗ್ಯ ಸರಿ ಇಲ್ಲದ ಕಾರಣ ನಾನು ಮಾತ್ರೆಗಳನ್ನು ತೆಗೆದುಕೊಂಡು ಹೋಗಬೇಕೆಂದು ನನ್ನ ಹತ್ತಿರ ಸದರಿ ಹಣ ಇಟ್ಟುಕೊಂಡಿರುತ್ತೇನೆ", ಎಂದು ವಿವರಣೆ ಕೊಟ್ಟಿರುತ್ತಾರೆ. ಈ ವಿವರಣೆಗಳನ್ನು ಪೋಲೀಸ್ ಇನ್ಸಪೆಕ್ಟರ್‌ರವರು ಪಂಚರಿಗೆ ಓದಿ ಹೇಳಿ ಅವರುಗಳ ಪ್ರತಿಕ್ರಿಯೆ ಕೇಳಲಾಗಿ, ಅವರುಗಳು ಸದರಿ ಖಾಸಗಿ ವ್ಯಕ್ತಿಗಳು ನೀಡಿದ ವಿವರಣೆಗಳು ಸಮಂಜಸವಾಗಿರುವುದಿಲ್ಲ, ಸದರಿ ಹಣವು ಅವರ ಅಂಗ ಶೋಧನೆ ಕಾಲಕ್ಕೆ ಅವರ ಶರ್ಟ, ಪ್ಯಾಂಟ್ ಜೇಬಿನಲ್ಲಿ ಟ್ರೇಜರಿ, ಡಸ್ಟಬಿನ್ ಹಾಗೂ ಟೇಬಲ್ ಡ್ರಾದಲ್ಲಿ ಶೋಧನೆ ಕಾಲಕ್ಕೆ ಲಭ್ಯವಾಗಿರುತ್ತವೆ ಅಂತಾ ಹೇಳಿ, ಅವರ ಬಳಿ ಲಭ್ಯವಾದ ಹಣದ ವಿವರಣೆಯು ಮೇಲ್ನೋಟಕ್ಕೆ ಸುಳ್ಳು ಬರೆದುಕೊಟ್ಟಿರುವುದು ಕಂಡು ಬರುತ್ತದೆ ಅಂತಾ ತಿಳಿಸಿದರು. ಸದರಿ ವಿವರಣೆಗಳನ್ನು ಪೋಲೀಸ್ ಇನ್ಸಪೆಕ್ಟರ್ ರವರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ನಗದು ಘೋಷಣಾ ರಿಜಿಸ್ಟರ್, ಹಾಜರಿ ಪುಸ್ತಕ, ಆವಕ ಪುಸ್ತಕ, ಜಾವಕ ಪುಸ್ತಕ ಹಾಗೂ ಕಂದಾಯ ನಿರೀಕ್ಷಕರ ದಿನಚರಿಯನ್ನು ಹಾಜರುಪಡಿಸಲು ತಿಳಿಸಿದ್ದು ಅದಕ್ಕೆ ಎದುರುದಾರರು ನಗದು ಘೋಷಣಾ ರಿಜಿಸ್ಟರ್, ಹಾಜರಿ ಪುಸ್ತಕ, ನಿರ್ವಹಿಸಿರುವುದಿಲ್ಲವೆಂದು ತಿಳಿಸಿ, ಆವಕ ಪುಸ್ತಕ, ಜಾವಕ ಪುಸ್ತಕ ಹಾಗೂ ಮಾಹೆ ಏಪ್ರಿಲ್ 2019ರ ತಿಂಗಳ ದಿನಚರಿ ಮಾತ್ರ ಹಾಜರುಪಡಿಸಿರುತ್ತಾರೆ. ಅವುಗಳನ್ನು ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಎದುರುದಾರರು ಹಾಗೂ ಖಾಸಗಿ ವ್ಯಕ್ತಿಗಳು ತಮ್ಮ ಬಳಿ ದೊರೆತ ಹಣದ ಬಗ್ಗೆ ಸ್ಪಷ್ಟವಾಗಿ ಒವರಣೆ ನೀಡದೇ ಇರುವುದರಿಂದ ಮತ್ತು ದಾಖಲಾತಿಗಳನ್ನು ಹಾಜರು ಪಡಿಸದೇ ಇರುವುದರಿಂದ ತನಿಖಾಧಿಕಾರಿಗಳು ಅವುಗಳನ್ನು ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಮತ್ತು ಎದುರುದಾರರನ್ನು ಹಾಗೂ ಮೇಲೆ ಹೇಳಿದ ವ್ಯಕ್ತಿಗಳನ್ನು ದಸ್ತಗಿರಿ ಮಾಡಿರುತ್ತಾರೆ. ಈ ಎಲ್ಲಾ

ಘಟನಾವಳಿಗಳನ್ನು ತನಿಖಾಧಿಕಾರಿಗಳು ಫೋಟೋ ತೆಗೆಯಿಸಿ, ದಿನಾಂಕ: 21/05/2019ರಂದು ಸಂಜೆ 04-30 ಗಂಟೆಯಿಂದ ಮಧ್ಯರಾತ್ರಿ 11-45 ಗಂಟೆಯವರಿಗೆ ಕಂದಾಯ ನಿರೀಕ್ಷಕರು ಬೈಲಹೊಂಗಲ, ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

viii. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

ix. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

x. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 13/12/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ನಾನು ಬೈಲಹೊಂಗಲ ಹೋಬಳಿಯ ಕಂದಾಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದು, ಈಗ ನಿವೃತ್ತಿ ಹೊಂದಿರುತ್ತೇನೆ ಹಾಗೂ ದಿಲಾವಾರ್ ಖಾದರ್‌ಸಾಬ್ ನದಾಫ್ ಮತ್ತು ದಾದಾಫೀರ್ ಅಲ್ಲಾಭಕ್ಷ್ ತಹಸೀಲ್ದಾರ್, ಇವರು ನನಗೆ

ಪರಿಚಯವಿರುವುದಿಲ್ಲ. ಸದರಿಯವರು ಕಂದಾಯ ಇಲಾಖೆಯಲ್ಲಿ ಸಾರ್ವಜನಿಕರಿಗೆ ಕೆಲಸ ಮಾಡಿಕೊಡಲು ಬಂದಿರಬಹುದು. ದಿನಾಂಕ:21/05/2019ರಂದು ತನಿಖಾಧಿಕಾರಿಗಳು ನನ್ನ ಕಚೇರಿಯಲ್ಲಿ ಶೋಧನೆ ನಡೆಸಿದಾಗ ನಮ್ಮ ಕಚೇರಿಯ ತಿಜೋರಿಯಲ್ಲಿ ಸಿಕ್ಕಂತಹ ರೂ.1,42,000/– ಹಣವು ನಮ್ಮ ಹೋಬಳಿಯ ಸರ್ಕಾರಿ ಫರ್ಡ ಜಮೀನು ಏಕ್‌ಸಾಲ್ ಲಿಲಾವು ಮಾಡಿದ ಹಣ, ರೈತರು ಕೆ–2 ಚಲನ್ ಮಾಡಲು ಕೊಟ್ಟಿದ್ದು ಇರುತ್ತದೆ. ಅದರಲ್ಲಿ ರೂ.90,000/–ಹಣ ನನ್ನ ಹೋಬಳಿಯ ಅನಿಗೋಳ್ ಗ್ರಾನಮದ ಲಿಲಾವು ರಕಮು ಇರುತ್ತದೆ. ರೂ.42,000/–ಹಣವು ಬೆಳವಡಿ ಗ್ರಾಮದ ಲಿಲಾವು ರಕಮು ಇರುತ್ತದೆ ಮತ್ತು ರೂ.10,000/–ಹಣ ಚಿವಡಿಗುಂಡಿ ಗ್ರಾಮದ ಲಿಲಾವು ರಕಮು ಇರುತ್ತದೆ ಹಾಗೂ ನನ್ನ ಪ್ಯಾಂಟಿನ ಕಿಸೆಯಲ್ಲಿ ದೊರೆತ ರೂ.24,140/–ಗಳು ರಂಜಾನ್ ಹಬ್ಬದ ಸಲುವಾಗಿ ನನ್ನ ಕುಟುಂಬ ಮತ್ತು ಮಕ್ಕಳಿಗೆ ಬಟ್ಟೆ ಮತ್ತು ಇತರೆ ವಸ್ತುಗಳನ್ನು ತರಲು ಇಟ್ಟಿದ್ದು ಇರುತ್ತದೆ. ದಿಲಾವಾರ್ ಖಾದರ್‌ಸಾಬ್ ನದಾಫ್ ಮತ್ತು ದಾದಾಫೀರ್ ಅಲ್ಲಾಭಕ್ಷ್ ತಹಸೀಲ್ದಾರ್, ಇವರ ಬಳಿ ಸಿಕ್ಕಂತಹ ಹಣದ ಬಗ್ಗೆ ಅವರು ಪ್ರತ್ಯೇಕವಾಗಿ ಈಗಾಗಲೇ ತಮಗೆ ವಿವರಣೆ ಕೊಟ್ಟಿದ್ದು ಇರುತ್ತದೆ. ವಿನಾಕಾರಣ ನನ್ನ ಮೇಲೆ ಅನಾಮಧೇಯ ಸುಳ್ಳು ದೂರಿನ ಮುಖಾಂತರ ಸುಳ್ಳು ಆರೋಪ ಮಾಡಿದ್ದು ಇರುತ್ತದೆ ಹಾಗೂ ತನಿಖಾಧಿಕಾರಿಗಳು ನನ್ನ ವಿವರಣೆಯನ್ನು ಅಲ್ಲಗೆಳೆದು ಕೊಟ್ಟ ಸೋಧನಾ ವರದಿಯಲ್ಲಿ ಹೇಳಿದಂತೆ ಸಾರ್ವಜನಿಕರು ವಿವಿದ ಕೆಲಸಗಳಿಗಾಗಿ ಸಲ್ಲಿಸಿರುವಂತಹ ಅರ್ಜಿಗಳನ್ನು ಕಂದಾಯ ನಿರೀಕ್ಷಕರ ಕಚೇರಿಯಲ್ಲಿ ಹಾಕುವುದು ಇರುವುದಿಲ್ಲ. ಸಾರ್ವಜನಿಕರು ತಮ್ಮ ಅರ್ಜಿಗಳನ್ನು ನೆಮ್ಮದಿ ಕೇಂದ್ರದ ಮುಖಾಂತರ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ, ಆರೋಪಿಸಿರುವಂತೆ ನಾವುಗಳು ಸಾರ್ವಜನಿಕ ಕೆಲಸ ಮಾಡಿಕೊಡಲು ಅನಧಿಕೃತವಾಗಿ ಸಾರ್ವಜನಿಕರಿಂದ ಹಣ ಪಡೆಯುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಕಂದಾಯ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದು, ಯಾವುದೇ ದುರ್ನಡತೆ ಎಸಗಿರುವುದಿಲ್ಲ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲ. ಆದ್ದರಿಂದ, ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಬೇಕೆಂದು ಮಾನ್ಯರಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ" ಎಂದು ಸಮಜಾಯಿಷಿ ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ಸಾರ್ವಜನಿಕ ಕೆಲಸ ಮಾಡಿಕೊಡಲು ಅನಧಿಕೃತವಾಗಿ ಹಣ ಕೇಳಿ ಪಡೆಯುತ್ತಿರುವುದು ನಿಜವೆಂದು ತಿಳಿದುಬಂದಿರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸಾರ್ವಜನಿಕ ಕೆಲಸ ಮಾಡಿಕೊಡಲು ಅನಧಿಕೃತವಾಗಿ ಹಣ ಕೇಳಿ ಪಡೆಯುತ್ತಿರುವುದು ನಿಜವೆಂದು ತಿಳಿದುಬಂದಿದ್ದು, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಎದುರುದಾರರು ದಿನಾಂಕ:31/07/2021ರಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ಕರ್ನಾಟಕ ಸಿವಿಲ್ ಸರ್ವಿಸ್ ನಿಯಮಾಳಿ 214 (2) (ಬಿ)(i) ರ ಪ್ರಕಾರ, ಸರ್ಕಾರಿ ನೌಕರನು ಕರ್ತವ್ಯದಿಂದ ನಿವೃತ್ತಿ ಹೊಂದಿದ ನಂತರ 4-ವರ್ಷಗಳವರೆಗೆ ಇಲಾಖಾ ವಿಚಾರಣೆಯನ್ನು ಸರ್ಕಾರದ ಅನುಮತಿ ಪಡೆದು ತೆಗೆದುಕೊಳ್ಳಬಹುದಾಗಿದೆ, ಅದರಂತೆ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ವಯೋ ನಿವೃತ್ತಿ ಹೊಂದಿದ ಎದುರುದಾರರ ಮೇಲೆ ಕರ್ನಾಟಕ ಸಿವಿಲ್ ಸರ್ವಿಸ್ ನಿಯಮಾಳಿ 214 (2) (ಬಿ)(i) ರ ಪ್ರಕಾರ, ಇಲಾಖಾ ವಿಚಾರಣೆಯನ್ನು ನಡೆಸಲು ಸರ್ಕಾರದ ಅನುಮತಿಯನ್ನು ನೀಡಿ, ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

2/2/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**